# ನಿಮಿತ್ತಮಾತ್ರ

**ಹೇಮಲತಾ ಮಾಧವರಾವ್**

> **ಛಾಯಾದೇವಿ ಅನಾಥಾಶ್ರಮವನ್ನು ನಡೆಸುತ್ತಿರುವ ಶ್ರೀಮತಿ ಶ್ಯಾಮಲಾ ಅವರ ಬಗ್ಗೆ ಹಾಗೂ ಅಲ್ಲಿ ಆಶ್ರಯ ಪಡೆದ ಚೇತನ ಎಂಬ ಅನಾಥ ಬಾಲಕನ ಹೃದಯಸ್ಪರ್ಶಿ ವೃತ್ತಾಂತವನ್ನು ಕಥಾರೂಪದಲ್ಲಿ ನಿರೂಪಿಸಿರುವ ಹೇಮಲತಾ ಮಾಧವರಾವ್ ಅವರು ನುರಿತ ಪತ್ರಿಕೋದ್ಯಮಿಗಳು.**

**ನಮ್ಮ** ಜೀವನ ನದಿ ಸಾಗರದ ಕಡೆ ಹರಿಯುತ್ತಿದೆ. ಎಷ್ಟು ಜನರ ಬಾಯಾರಿಕೆ ನೀಗಿಸಿದರೆ ಅಷ್ಟು ಸಾರ್ಥಕ. ಶ್ಯಾಮಲಾ ತಂದೆ ತೀರಿಕೊಂಡಾಗ ಆಕೆಗೆ ಏಳು ವರ್ಷ. ಯಾರಿಂದಲೂ ಏನನ್ನೂ ನಿರೀಕ್ಷಿಸದೆ ಬದುಕುವುದನ್ನು ಕಲಿತಳು. ಇತರರ ದುಃಖಕ್ಕೆ ಆಕೆಯ ಹೃದಯ ಮಿಡಿಯುತ್ತಿತ್ತು. ಮಾಲಿ ಇಲ್ಲದೆ ತೋಟ ಸಾಧ್ಯವಿಲ್ಲ. ಹಾಗೆಯೇ ತಾಯಿತಂದೆಯರಿಲ್ಲದೆ ಮಕ್ಕಳು ಸರಿಯಾಗಿ ಬೆಳೆಯ ಲಾರವು. ಈ ಅನುಭವ ಆಕೆಯದು. ಯಾವಾಗಲೂ ದೇವಾಲಯಕ್ಕೆ ಹೋಗುತ್ತಿದ್ದಳು, ದೇವರನ್ನು ಕೇಳುತ್ತಿದ್ದಳು: 'ಪ್ರಪಂಚದಲ್ಲಿ ಇಷ್ಟೊಂದು ಕಷ್ಟ ಏಕೆ? ನನ್ನಲ್ಲಿ ಭಕ್ತಿ ಶ್ರದ್ಧೆ ಇವೆ. ತೋಟಗಾರನಂತೆ ಎಲ್ಲರಿಗೂ ಸಹಾಯ ಮಾಡುವ ಶಕ್ತಿಯನ್ನು ನನಗೆ ಕೊಡು.'

ಮೆಟ್ರಿಕ್ ಪಾಸಾದನಂತರ ಆಕೆಗೆ ನೌಕರಿ ಸಿಕ್ಕಿತು. ಒಂದು ಸಣ್ಣ ಮನೆ. ಅವಿಭಕ್ತ ಕುಟುಂಬ. ಸಂಬಳ ಕಡಮೆ. ಆದರೆ ಭಕ್ತಿಯಿಂದ ಸಾಧ್ಯವಾದುದನ್ನು ಮಾಡುತ್ತಿದ್ದಳಾಕೆ. ತಾಯಿ ಖಾಯಿಲೆ ಬಿದ್ದಾಗ ಜೀವನ ಕಷ್ಟವಾಯಿತು. ಭಗವದ್ಭಕ್ತಿ ಕಡಮೆ ಯಾಗಲಿಲ್ಲ. ದೇವಾ ಲಯಕ್ಕೆ ಹೋದಾಗ ಶಾಂತಿ ಸಿಗುತ್ತಿತ್ತು.



ಒಂದು ದಿನ ಪೂಜಾರಿ ಕೇಳತೊಡಗಿದನು:

'ನೀವು ಇಷ್ಟು ವರ್ಷಗಳಿಂದ ಬರುತ್ತಿದ್ದೀರಿ. ನೀವು ಮಕ್ಕಳಿಗೆ ಏನೇನೋ ಹಂಚುತ್ತೀರಿ.ಯಾರಿಂದಲೂ ಏನೂ ಕೇಳುವುದೂ ಇಲ್ಲ. ನೀವು ಅವಿವಾಹಿತರು, ಸಾಕಷ್ಟು ವರಮಾನವೂ ಇಲ್ಲ!'

'ನಾನು ಸ್ತ್ರೀ. ನನ್ನಲ್ಲಿ ಸಹಜವಾಗಿ ಮಾತೃಭಾವ ಉಕ್ಕಿಬರುತ್ತದೆ. ಹೀಗೆ ಕೊಡುವುದರಿಂದ ನನಗೆ ಆನಂದ'—ಆಕೆ ಹೇಳಿದಳು.

ಪೂಜಾರಿ: 'ನಿಮ್ಮಲ್ಲಿ ಇಷ್ಟೊಂದು ವಾತ್ಸಲ್ಯಭಾವವಿದೆ. ನಾನು ಒಂದು ವಿಷಯ ಕೇಳಬಹುದೆ? ತಪ್ಪು ತಿಳಿಯಬೇಡಿ. ಒಂದು ಆಸ್ಪತ್ರೆಯಲ್ಲಿ ನಾಲ್ಕುದಿನದ ಮಗುವೊಂದಿದೆ. ಅದಕ್ಕೆ ನಿಮ್ಮ ಮಾತೃ ವಾತ್ಸಲ್ಯವನ್ನು ನೀಡಲು ಸಾಧ್ಯವೇ?'

ಆಕೆ ಮನಸ್ಸಿನಲ್ಲಿಯೇ ಚಿಂತಿಸಿದಳು : 'ಇದು ದೊಡ್ಡ ಪ್ರಶ್ನೆ. ನನಗೀಗ ಏಳ ವರ್ಷ. ನನಗೆ ಸಣ್ಣ ನೌಕರಿ. ಈ ಚಿಕ್ಕ ಮಗುವಿಗೆ ಹೇಗೆ ತಾಯಿಯಾಗಲಿ? ತಾಯಿಗೂ ಖಾಯಿಲೆ. ಹೇಗೆ ಅದನ್ನು ಸಲಹಲಿ?'

ಆಕೆಯ ಮನಸ್ಸಿನಲ್ಲಿ ಏಳುತ್ತಿದ್ದ ಆಲೋಚನೆಯನ್ನು ಅರಿತನೋ ಎನ್ನುವಂತೆ ಪೂಜಾರಿ ಹೇಳಿದ : 'ಇದು ದೇವರ ಇಚ್ಛೆಯಾದರೆ ಹಣದ ಕೊರತೆಯಿಲ್ಲ. ಆದರೆ ಪ್ರೀತಿಯಿಂದ ನೋಡಿಕೊಳ್ಳುವವರು ಬೇಕಾಗಿದ್ದಾರೆ.'

'ನಾನು ಎರಡು ದಿನಗಳಲ್ಲಿ ಹೇಳುತ್ತೇನೆ' ಎಂದು ಹೇಳಿ ಮನೆಗೆ ಹಿಂದಿರುಗಿದಳು. ಇದರ ಬಗ್ಗೆ ಬಹಳ ಆಲೋಚಿಸ ತೊಡಗಿದಳು. 'ದೇವರು ತನ್ನ ಗಿಡವನ್ನು ನೋಡಿಕೊಳ್ಳಲು ನನ್ನನ್ನು ಮಾಲಿಯನ್ನಾಗಿಸುತ್ತಿದ್ದಾನೆ'—ಎಂದುಕೊಂಡು ಒಪ್ಪಿದಳು. ಪ್ರೀತಿಯಿಂದ ನೋಡಿಕೊಳ್ಳುವುದು ತನ್ನ ಪಾಲಿನದು, ಉಳಿದುದು ಇತರರಿಗೆ ಬಿಟ್ಟದ್ದು, ಎಂದು ನಿರ್ಧರಿಸಿದಳು.

ಮಗುವನ್ನು ಮನೆಗೆ ಕರೆತಂದುದಾಯಿತು. ಪೂಜಾರಿ ಮತ್ತು ಇತರರು ಒಂದು ಟ್ರಸ್ಟ್ ಸ್ಥಾಪಿಸಲು ನಿರತರಾದರು. ಒಂದು ಅನಾಥಾಶ್ರಮ ಪ್ರಾರಂಭವಾಯಿತು.

ಈಗ ಏಳು ವರ್ಷಗಳಾಗಿವೆ. ಹದಿನೆಂಟು ಅನಾಥ ಮಕ್ಕಳಿಗೆ ಆಶ್ರಯ ನೀಡಲಾಗುತ್ತಿದೆ. ನಾಲ್ಕು ಮಹಿಳೆಯರು ಕೆಲಸ ಮಾಡುತ್ತಿರುವರು. ನಿಜವಾಗಿ ಭಗವಂತನ ಕೃಪೆಯಿದ್ದರೆ ಎಲ್ಲವೂ ಕೂಡಿಬರುತ್ತದೆ. ತನ್ನದು ಕೇವಲ ಮಾಲಿಯ ಕೆಲಸ ಎಂಬ ಭಾವ ಆಕೆಯದು. ಭಗವಂತನೇ ಎಲ್ಲ ಒದಗಿಸುವುದು ಎನ್ನುವುದಕ್ಕೆ ಚೇತನ ಎಂಬ ಬಾಲಕನ ಉದಾಹರಣೆ ಜ್ವಲಂತ ನಿದರ್ಶನವಾಗಿದೆ.

ಚೇತನ ಐದು ವರ್ಷದ ಬಾಲಕ. ಅವನ ಅಜ್ಜಿ ಕರೆದುಕೊಂಡು ಬಂದಳು. ಅವನ ದೇಹ ಜರ್ಜರಿತ, ಚಿಂದಿ ಬಟ್ಟೆ, ಮುಖ ಸುಟ್ಟುಹೋಗಿದೆ, ಕಣ್ಣು ಎದ್ದು ಕಾಣುತ್ತಿದೆ. ಬಲಗೈ ಹಸ್ತ ಸುಟ್ಟುಹೋಗಿದೆ. ಅವನಿಗೆ ಸರಿಯಾಗಿ ನಿಲ್ಲಲೂ ಅಸಾಧ್ಯ. ಮನಸ್ಸು ಭಯಭೀತ. ಬಾಯಲ್ಲಿ ಮಾತು ಹೊರಡದು.